**ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಗಳವರ ನ್ಯಾಯಾಲಯ, ಆಳಂದ.**

ಸಿ.ಸಿ.ನಂಃ 228/2018 ಸಿ.ಡಬ್ಲ್ಯೂ –13 ಪಿ.ಡಬ್ಲ್ಯೂ -9

| | | |
|---|---|---|
| ಹೆಸರು | ಃ | ಕುಶಪ್ಪ |
| ತಂದೆಃ ಗಂಡ | ಃ | ಬಾಬುರಾವ |
| ವಯಸ್ಸು | ಃ | ೨೮ ವರ್ಷ |
| ಉದ್ಯೋಗ | : | ಕೂಲಿಕೆಲಸ |
| ವಾಸಸ್ಥಳ | ಃ | ಕೊರಳ್ಳಿ |

ದಿನಾಂಕಃ೨೧.೧೧.೨೦೨೩
ಸತ್ಯ ಪ್ರತಿಜ್ಞೆಯ ಮೇರೆಗೆ

---

**ಮುಖ್ಯ ವಿಚಾರಣೆ ಮಾನ್ಯ ಸಸಅ ಅವರಿಂದ ಃ**

ಆರೋಪಿ ಪರಿಚಯವಿದೆ. ಚಾಸಾ-1 ರಿಂದ 12, 14, 15 ರವರ ಪರಿಚಯ ಇದೆ.

ದಿ.29.10.2017 ರಂದು ಚಾಸಾ-೧ ರವರು ತಮ್ಮ ಮೋಟರ್ ಸೈಕಲ ಮೇಲೆ ಕೊರಳ್ಳಿ ಗ್ರಾಮದಿಂದ ಭುಸನೂರ ಗ್ರಾಮಕ್ಕೆ ಹೊರಟಿದ್ದರು. ಆಗ ಜೀಪ್ ವಾಹನವು ಅವರಿಗೆ ಅಪಘಾತಪಡಿಸಿರುತ್ತದೆ. ನಂತರ ನಾವು ಅವರನ್ನು ಕೊರಳ್ಳಿ ಸರಕಾರಿ ಆಸ್ಪತ್ರೆಗೆ ಕರೆದುಕೊಂಡು ಹೋದೆವು, ನಂತರ ಕಲಬುರಗಿ ಬಸವೇಶ್ವರ ಆಸ್ಪತ್ರೆಯಲ್ಲಿ ದಾಖಲು ಮಾಡಿದೆವು, ಅಲ್ಲಿಯೂ ಸಹ ಕೂಡ ಹೆಚ್ಚಿನ ಚಿಕಿತ್ಸೆಗಾಗಿ ಬಾಬಾ ಹೌಸ್ ಆಸ್ಪತ್ರೆಗೆ ಕಲಬುರಗಿಗೆ ಕರೆದುಕೊಂಡು ಹೋಗು ಎಂದು ಹೇಳಿದರು, ಅಲ್ಲಿ ದಾಖಲು ಮಾಡಿದೆವು. ನಂತರ ಅವರೂ ಸಹ ಕೂಡ ಬೆಂಗಳೂರು ಆಸ್ಪತ್ರೆಗೆ ಕರೆದುಕೊಂಡು ಹೋಗಿ ಎಂದು ಹೇಳಿದರು. ನಂತರ ಚಾಸಾ-೧ ರವರು ಮೃತ ರಾಗಿರುತ್ತಾರೆ.

(ಈ ಹಂತದಲ್ಲಿ ಮಾನ್ಯ ಸಸಅ ರವರು ಸಾಕ್ಷಿಯನ್ನು ಭಾಗಶಃ ಪ್ರತಿಕೂಲ ಸಾಕ್ಷಿಯನ್ನಾಗಿ ಪರಿಗಣಿಸಿ ಪಾಟೀ ಸವಾಲು ಮಾಡಲು ಅನುಮತಿ ಕೋರಿರುತ್ತಾರೆ, ನೀಡಲಾಯಿತು)

**ಪಾಟೀ ಸವಾಲು ಸಸಅ ರವರಿಂದಃ**

ಚಾಸಾ-೧ ರವರು ಮೋಟರ್ ಸೈಕಲ ನಂ. ಕೆ.ಎ 32 ಇ.ಎಲ್ 0534 ರಲ್ಲಿ ನಡೆದಿದ್ದರು ಎಂದರೆ ಸರಿ. ಚಾಸಾ-೧ ರವರು ಸದರಿ ಮೋಟರ್ ಸೈಕಲ ಮೇಲೆ ಹೋಗುತ್ತಿರುವಾಗ ಅಮರ್ಜಾ ಬ್ರಿಡ್ಜ ಬಳಿ ಜೀಪ್ ನಂ. ಎಂ.ಹೆಚ್-12-ಬಿಜಿ-7085 ರ ಚಾಲಕನು ಅತಿ ಜೋರಾಗಿ ನಿರ್ಲಕ್ಷತನದಿಂದ ಓಡಿಸಿಕೊಂಡು ಬಂದು ಸಂಜೆ 6.00 ಗಂಟೆ ಸುಮಾರಿಗೆ ಅಪಘಾತಪಡಿಸಿರುತ್ತಾನೆ ಎಂಧರೆ ಸರಿ. ಸದರಿ ಅಪಘಾತಪಡಿಸಿದ ಚಾಲಕನು ಸ್ಥಳದಿಂದ ಓಡಿ ಹೋದನು, ಅವನು ಹೆಸರು ರಾಜು ತಂದೆ ರಾಮು ರಾಠೋಡ ಎಂದು ಗೊತ್ತಾಯಿತು ಎಂದರೆ ಸರಿ. ಅಪಘಾತವಾಗಿದ್ದರಿಂದ ಚಾಸಾ-೧ ರವರಿಗೆ ತಲೆಯ ಎಡಭಾಗಕ್ಕೆ ಕಚ್ಚುಬಿದ್ದು ರಕ್ತಗಾಯವಾಗಿತ್ತು, ಬಲಗೈ ಮಣಿಕಟ್ಟಿನಿಂದ ಮುಂಗೈಗೆ ತೀವ್ರ ಸ್ವರೂಪದ ಗಾಯ ಮತ್ತು ಹೊಟ್ಟೆಗೆ ತರಚಿದ ಗಾಯಗಳು ಆಗಿದ್ದವು ಎಂದರೆ ಸರಿ. ಬಲಗಾಲಿನ ಮೊಳಕಾಲಿನ ಹತ್ತಿರ

ತೀವ್ರ ಸ್ವರೂಪದ ರಕ್ತಗಾಯ ಮತ್ತು ಗುಪ್ತಗಾಯಗಳು ಆಗಿದ್ದವು ಎಂಥರೆ ಸರಿ. ಬಲಗಾಲಿನ ಪಾದದ ಮೇಲ್ಭಾಗದಲ್ಲಿ ತೀವ್ರಸ್ವರೂಪದ ರಕ್ತಗಾಯ ಮತ್ತು ಗುಪ್ತಗಾಯಗಳು ಆಗಿದ್ದವು ಎಂಥರೆ ಸರಿ. ನಾನು ಈ ರೀತಿಯಾಗಿ ಪೋಲಿಸರಿಗೆ ಹೇಳಿಕೆ ನೀಡಿರುತ್ತೇನೆ ಎಂದರೆ ಸರಿ. ನಂತರ ದಿ.14.11.2017 ರಂದು ಪೊಲಿಸರು ಆಳಂದ ಸರ್ಕಲ್ ಕಚೇರಿಗೆ ಕರೆಯಿಸಿ ಅಪಘಾತಪಡಿಸಿದ ಆರೋಪಿ ಈತನೇ ಎಂದು ತೋರಿಸಿರುತ್ತಾರೆ ಎಂಥರೆ ಸರಿ. ನಾನು ಈ ರೀತಿಯಾಗಿ ಪೊಲಿಸರಿಗೆ ಹೇಳಿಕೆ ನಿಡಿರುತ್ತೇನೆ ಎಂಥರೆ ಸರಿ.

## ಪಾಟೀ ಸವಾಲು ಆರೋಪಿ ಪರ ಶ್ರೀ ಎ.ಡಬ್ಲು.ಎ ವಕೀಲರಿಂದ

ಚಾಸಾ-೧ ನನ್ನ ಅಜ್ಜನಾಗಬೇಕು. ಚಾಸಾ-೧೪ ನನ್ನ ಅಣ್ಣನಾಗಬೇಕು. ಚಾಸಾ-೧೨ ನನ್ನ ಸ್ನೇಹಿತನಾಗಬೇಕು. ಚಾಸಾ-೧ ರವರ ಜೊತೆ ನಾನು ಮೋಟರ್ ಸೈಕಲನಲ್ಲಿ ಹೋಗಿರುವುದಿಲ್ಲ. ಸಾಕ್ಷಿ ಮುಂದುವರೆದು ನಾನು ಟ್ರಾಕ್ಟರನಲ್ಲಿ ಭೂಸನೂರ ಕಡೆಗೆ ಹೊರಟಿದ್ದೆ ಎಂದು ನುಡಿಯುತ್ತಾರೆ. ಅಪಘಾತವಾಗುವುದನ್ನು ನಾನು ಕಣ್ಣಾರೆ ನೋಡಿರುವುದಿಲ್ಲ, ಸಾಕ್ಷಿ ಮುಂದುವರೆದು ಅವರನ್ನು ವಾಹನದಲ್ಲಿ ಆಸ್ಪತ್ರೆಗೆ ಹಾಕಿರುತ್ತೇನೆ ಎಂದು ನುಡಿಯುತ್ತಾರೆ. ನೀನು ಟ್ರಾಕ್ಟರನಲ್ಲಿ ಹೋಗುತ್ತಿದ್ದೆನು ಎಂದು ಹೇಳುತ್ತಿಯಲ್ಲ ಅದು ಯಾರ ಟ್ರಾಕ್ಟರ ಎಂದು ಹೇಳಲು ಬರುತ್ತದೆಯಾ ಎಂದರೆ ಸಾಕ್ಷಿಯು ನಾನು ಮೋಟರ್ ಸೈಕಲ ನಂ. ಕೆ.ಎ-32-3657 ರ ಮೇಲೆ ಹೋಗಿರುತ್ತೇನೆ. ನನ್ನ ತಾಯಿಗೆ ಆರಾಮವಿಲ್ಲದ ಕಾರಣ ನಾನು ಭುಸನೂರಗೆ ಮೆಡಿಕಲ್ ಅಂಗಡಿಗೆ ಔಷಧ ತೆಗೆದುಕೊಂಡು ಬರಲು ಹೊರಟಿದ್ದೆನು. ನಾನು ಘಟನಾ ಸ್ಥಳವನ್ನು ತಲುಪಿದಾಗ ಸಾಯಂಕಾಲ 6.00 ಗಂಟೆ ಆಗಿತ್ತು. ಚಾಸಾ-೧ ರವರು ಕೊರಳ್ಳಿ ಗ್ರಾಮವನ್ನು ಎಷ್ಟು ಗಂಟೆಗೆ ಬಿಟ್ಟರು ಎಂದು ನನಗೆ ಹೇಳಲು ಬರುವುದಿಲ್ಲ, ಘಟನೆಯು ಸುಮಾರು 6.00 ಗಂಟೆಗೆ ಆಗಿರುತ್ತದೆ ಎಂದು ನುಡಿಯುತ್ತಾರೆ. ಘಟನಾ ಸ್ಥಳವು ಫ್ಯಾಕ್ಟರಿನಿಂದ ಅರ್ಧ ಕಿ.ಮೀ. ಅಂತರವಿದೆ. ಔಷಧ ಅಂಗಡಿಯ ಮಾಲೀಕರು ಯಾರು ಮತ್ತು ಔಷಧ ಅಂಗಡಿಯ ಹೆಸರು ಏನೆಂದು ನನಗೆ ಗೊತ್ತಿಲ್ಲ. ಯಾವ ವೈದ್ಯರ ಬಳಿಯೂ ತೋರಿಸಿರುವುದಿಲ್ಲ, ತಲೆ ನೋವು ಇದೆ ಎಂದು ಹೇಳಿದರು ಅದಕ್ಕೋಸ್ಕರ ಔಷಧ ಅಂಗಡಿಗೆ ಹೋಗಿ ಗುಳಿಗೆ ತರಲು ಹೋಗುತ್ತಿದ್ದೆನು. ಔಷಧ ಅಂಗಡಿಗೆ ಅವತ್ತಿನ ದಿನ ನಾನು ಹೋಗಿರುವುದಿಲ್ಲ. ಸಾಕ್ಷಿ ಮುಂದುವರೆದು ಮಧ್ಯದಲ್ಲಿ ಅಪಘಾತವಾಗಿದ್ದ ಕಾರಣ ಅದರಲ್ಲಿ ತೊಡಗಿಕೊಂಡೆ ಎಂದು ನುಡಿಯುತ್ತಾರೆ. ನಾನು ಯಾವ ಔಷಧಿಯನ್ನು ತೆಗೆದುಕೊಂಡು ಬರಲು ಹೋಗಿದ್ದೆನು ಎಂದು ಹೇಳಲು ಬರುವುದಿಲ್ಲ, ನಾನು ತಲೆ ನೋವಿನ ಗುಳಿಗೆಯನ್ನು ಕೇಳಿದರೆ ಅವರು ಕೊಡುತ್ತಾರೆ ಎಂದು ನುಡಿಯುತ್ತಾರೆ.

ಭೂಸನೂರ ಕಡೆಗೆ ಹೊರಟಾಗ ಎಡಗಿನ ಬಾಜು ಅಪಘಾತ ನಡೆದಿರುತ್ತದೆ. ನಾನು ಅಪಘಾತ ಸ್ಥಳಕ್ಕೆ ಹೋದಾಗ ಅಲ್ಲಿ ಯಾರೂ ಇರಲಿಲ್ಲ. ಚಾಸಾ-೧ ಮತ್ತು ಚಾಸಾ-೬ ರವರ ರಸ್ತೆಯ ಯಾವ ಬದಿಗೆ ಬಿದ್ದಿದ್ದರು ಎಂಥರೆ ಸಾಕ್ಷಿಯು ರಸ್ತೆಯ ಮೇಲೆ ಬಿದ್ದಿದ್ದರು ಎಂದು ನುಡಿಯುತ್ತಾರೆ. ಅಪಘಾತಪಡಿಸಿದೆ ಎಂದು ಹೇಳುತ್ತಿರಲ್ಲ ಅದು ಯಾವ ಬದಿಗೆ ನಿಂತಿತ್ತು ಎಂದರೆ ಸಾಕ್ಷಿಯು ರಸ್ತೆಯ ಮೇಲೆ ನಿಂತಿತ್ತು ಎಂದು ನುಡಿಯುತ್ತಾರೆ. ಜೀಪಿನ ಯಾವ ಭಾಗ ಜಖಂ ಆಗಿತ್ತು ಎಂದು ನಾನು ನೋಡಿರುವುದಿಲ್ಲ. ಜೀಪು ಮೋಟರ ಸೈಕಲದಿಂದ 10 ಫೂಟು ಅಂತರದಲ್ಲಿ ನಿಂತಿತ್ತು. ಚಾಸಾ-೧ ಮತ್ತು ೬ ರವರನ್ನು ಜೀಪಿನಲ್ಲಿ ಚಾಸಾ-14, 15 ರವರ ಮೂಲಕ ಕಳಿಸಿರುತ್ತೇನೆ. ಸದರಿ ನಾನು ಹಾಕಿಸಿ ಕಳಿಸಿದ ಜೀಪಿನ ಚಾಲಕ ಪ್ರದೀಪ ಇರುತ್ತದೆ, ಅದರ ಸಂಖ್ಯೆ ನನಗೆ ಹೇಳಲು ಬರುವುದಿಲ್ಲ. ನಾನು ಘಟನಾ ಸ್ಥಳಕ್ಕೆ ಹೋದ 15 ನಿಮಿಷದಲ್ಲಿ ಚಾಸಾ-14 ಮತ್ತು 15 ರವರು ಬಂದಿರುತ್ತಾರೆ, ಅವರು ಎದರಲ್ಲಿ ಬಂದರು ಎಂದು ನನಗೆ ಹೇಳಲು ಬರುವುದಿಲ್ಲ. ಚಾಸಾ-೧ ಮತ್ತು ೬ ರವರನ್ನು

ನಾನು ಕೊರಳ್ಳಿ ಗ್ರಾಮಕ್ಕೆ ಕರೆದುಕೊಂಡು ಬಂದಿರುತ್ತೇನೆ. ಕೊರಳ್ಳಿ ಸರಕಾರಿ ಆಸ್ಪತ್ರೆಗೆ ನಾವು ತಲುಪಿದಾಗ 6.30 ಆಗಿತ್ತು. ಸದರಿ ವೈದ್ಯರ ಹೆಸರು ನನಗೆ ಗೊತ್ತಿಲ್ಲ. ಕೊರಳ್ಳಿ ಆಸ್ಪತ್ರೆಯಲ್ಲಿರುವ ವೈದ್ಯರು ಚಾಸಾ-೧ ಮತ್ತು ೬ ರವರನ್ನು ನೋಡಿರುತ್ತಾರೆ. ನಾನು ಗುಲಬರ್ಗಾ ಆಸ್ಪತ್ರೆಗೆ ಅವರ ಜೊತೆ ಹೋಗಿರುವುದಿಲ್ಲ. ಚಾಸಾ-೧೪ ಮತ್ತು ೧೫ ರವರು ಚಾಸಾ-೧ ಮತ್ತು ೬ ರವರನ್ನು ಅದೇ ಜೀಪಿನಲ್ಲಿ ಗುಲಬರ್ಗಾ ಆಸ್ಪತ್ರೆಗೆ 7.00 ಗಂಟೆ ಸುಮಾರಿಗೆ ಕರೆದುಕೊಂಡು ಹೋಗಿರುತ್ತಾರೆ.

ನನ್ನನ್ನು ಪೋಲಿಸರು ಯಾವತ್ತು ಕರೆದಿರುವುದಿಲ್ಲ. ಪೋಲಿಸರು ಈ ಕೇಸಿನ ಕುರಿತು ಏನು ಬರೆದುಕೊಂಡಿರುತ್ತಾರೆ ಎಂದು ನನಗೆ ಗೊತ್ತಿಲ್ಲ ಎಂಥರೆ ಸಾಕ್ಷಿಯು ನನಗೆ ಕರೆದಿರುವುದಿಲ್ಲ ಎಂದು ನುಡಿಯುತ್ತಾರೆ. ನಾನು ಮದುರಿನ ಗುಲಬರ್ಗಾ ಆಸ್ಪತ್ರೆಗೆ ಹೋಗಿರುತ್ತೇನೆ. ಚಾಸಾ-೧ ಮತ್ತು ೬ ರವರನ್ನು ಯಾವ ವಾರ್ಡಿನಲ್ಲಿ ಹಾಕಿದ್ದರು ಎಂದು ನನಗೆ ಗೊತ್ತಿಲ್ಲ. ಚಾಸಾ-೧ ಮತ್ತು ೬ ರವರು ಎಷ್ಟು ದಿನ ಒಳರೋಗಿಯಾಗಿ ಚಿಕಿತ್ಸೆ ಪಡೆದುಕೊಂಡರು ಎಂದು ನನಗೆ ಗೊತ್ತಿಲ್ಲ. ಬಾಬಾ ಆಸ್ಪತ್ರೆ ಮತ್ತು ಬಸವೇಶ್ವರ ಆಸ್ಪತ್ರೆ ಬೇರೆ ಬೇರೆ ಆಸ್ಪತ್ರೆ ಎಂದರೆ ಸರಿ. ನಾನು ಬಾಬಾ ಹೌಸ್ ಆಸ್ಪತ್ರೆಗೆ ಹೋಗಿರುತ್ತೇನೆ. ಚಾಸಾ-೧ ರವರು ನಾನು ಆಸ್ಪತ್ರೆಗೆ ಹೋದಾಗ ಮಾತನಾಡುವ ಸ್ಥಿತಿಯಲ್ಲಿರಲಿಲ್ಲ. ಚಾಸಾ-೧ ರವರಿಗೆ ಪ್ರಜ್ಞೆ ಇರಲಿಲ್ಲ ಎಂಥರೆ ಸರಿ.

ನನ್ನನ್ನು ಆಳಂದ ಸರ್ಕಲ್ ಇನ್ಸಪೆಕ್ಟರ್ ಎಂದೂ ಕರೆದಿರುವುದಿಲ್ಲ. ಆರೋಪಿಯನ್ನು ನಾನು ಇದೇ ಮೊದಲ ಬಾರಿಗೆ ನೋಡುತ್ತಿದ್ದೇನೆ ಎಂಥರೆ ಸರಿ ಅಲ್ಲ. ಸರ್ಕಲ್ ಇನ್ಸಪೆಕ್ಟರ ಆಳಂದವರು ಸದರಿ ಆರೋಪಿಯೇ ಅಪಘಾತಪಡಿಸಿದವನು ಎಂದು ತೋರಿಸಿದರು ಎಂದರೆ ಸರಿ. ಚಾಸಾ-೧ ನನ್ನ ಅಜ್ಜ, ಚಾಸಾ-೧೪ ಮತ್ತು ೧೫ ರವರು ನನ್ನ ಸಹೋದರರಾಗಬೇಕಾದ ಕಾರಣ ಪ್ರಕರಣಕ್ಕೆ ಸಹಾಯವಾಗಲಿ ಎಂದು ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿ ಅಲ್ಲ. ಆರೋಪಿ ಜೀಪನ್ನು ಅತಿ ಜೋರಾಗಿ ನಿರ್ಲಕ್ಷತನದಿಂದ ಚಾಲಾಯಿಸಿಕೊಂಡು ಬಂದು ಅಪಘಾತ ಪಡಿಸಿರುತ್ತಾನೆ ಎಂದು ಸುಳ್ಳು ಸಾಕ್ಷಿ ನುಡಿಯುತ್ತಿದ್ಧೇನೆ ಎಂದರೆ ಸರಿ ಅಲ್ಲ. ಅಪಘಾತವು ಭುಸನೂರ ಫ್ಯಾಕ್ಟರಿ ಕಡೆಗೆ ಹೋಗುವ ರಸ್ತೆಯ ಮಧ್ಯೆ ಅರ್ಧ ಕಿ.ಮೀ. ಅಂತರದಲ್ಲಿ ಆಗಿರುತ್ತದೆ ಎಂದು ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂಥರೆ ಸರಿ ಅಲ್ಲ. ಈ ಪ್ರಕರಣದ ಬಗ್ಗೆ ನನಗೆ ಯಾವುದೇ ಮಾಹಿತಿ ಇಲ್ಲದಿದ್ದರೂ ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂಥರೆ ಸರಿ ಅಲ್ಲ. ಅಪಘಾತವು ಆರೋಪಿಯ ನಿಷ್ಕಾಳಜಿತನದಿಂದ ಆಗಿರುತ್ತದೆ ಎಂದು ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿ ಅಲ್ಲ.

ಮರುವಿಚಾರಣೆ : ಇರುವುದಿಲ್ಲ.

ಓ.ಹೇ.ಕೇ.ಸರಿ ಇದೆ.

ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು
ಜೆ.ಎಂ.ಎಫ್.ಸಿ. ಆಳಂದ.